ಡಿಜಿಟಲ್ ಯುಗದಲ್ಲಿ ನಿಮ್ಮ ಮೇಲೆಯೇ ಇದೆ ಎಂದಾಯಿತು. ಸ್ವಚ್ಛತೆ ಎನ್ನುವುದು ಎರಡು ಆಯಾಮಗಳನ್ನು ಹೊಂದಿದೆ ತಾನೇ. ನಾವು ಸ್ವಯಂ ಕಸವನ್ನು ಸೃಷ್ಟಿಸದೇ ಇರುವುದು ಒಂದೆಡೆಯಾದರೆ, ಕೊಳಕು ಕಸ ನಮ್ಮ ಮನೆ–ಮನಸ್ಸು ಸೇರದಂತೆ ತಡೆಯುವುದು ಮತ್ತೊಂದು ಆಯಾಮ. ಆದಾಗ್ಯೂ ಕೊಳಕು ಕಾಣಿಸಿಕೊಂಡಾಗ ಅದನ್ನು ಸ್ವಚ್ಛಗೊಳಿಸುವುದು ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಗೋಡೆ ಸ್ವಚ್ಛವಾಗಿ ಇಟ್ಟುಕೊಳ್ಳುವುದು ತುಸು ಸಾಹಸದ ಕೆಲಸವೇ ಸೈ.

ಡಿಜಿಟಲ್ ಲೋಕವೆಂಬ ವೇದಿಕೆಯಲ್ಲಿ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಅಳೆದು ತೂಗಿ, ಅವುಗಳ ಪರಿಣಾಮ ಎಷ್ಟಿರಬಹುದು ಎಂಬ ಅಂದಾಜು ಮಾಡುವುದಕ್ಕೆ ಅವಕಾಶವೇ ಇಲ್ಲ. ತಕ್ಷಣದ ಪ್ರತಿಕ್ರಿಯೆಯಾಗಿ ಅಲ್ಲಿ ಎಲ್ಲವೂ ವ್ಯಕ್ತವಾಗುತ್ತ ಹೋಗುತ್ತದೆ. ಒಂದು ಅಭಿವ್ಯಕ್ತಿಯು ನೂರಾರು ಪ್ರತಿಕ್ರಿಯೆಗಳನ್ನು ಆಹ್ವಾನಿಸುವುದು ಸಹಜವೇ ಆಗಿದೆ. ಹಾಗಿದ್ದರೆ ಸಾರ್ವಜನಿಕ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳಿಗೆ ಅನ್ವಯಿಸಿ ಫೇಸ್‌ಬುಕ್ ಸ್ಟೇಟಸ್‌ಗಳನ್ನು ಹಾಕುವ ಮುನ್ನ ಎಷ್ಟೊಂದು ಬಾರಿ ಯೋಚನೆ ಮಾಡಬೇಕು?

ಸಾಮಾಜಿಕ ಜಾಲತಾಣಗಳ ವಿಶ್ಲೇಷಕರು ಹೇಳುವ ಪ್ರಕಾರ, ಗೋಡೆ ಮೇಲಿನ ಅಶುಚಿತ್ವಕ್ಕೆ ಮೂಲ ಕಾರಣ ಸಿಟ್ಟು. ಸಿಟ್ಟು ಸಾತ್ವಿಕವಾಗಿದ್ದಲ್ಲಿ ಅದು ಸಮಾಜದಲ್ಲಿ ಒಳ್ಳೆಯ ಬದಲಾವಣೆ ತರಬಲ್ಲದು. ಆದರೆ ಅದು ಹತಾಶೆಯ ಇನ್ನೊಂದು ರೂಪದಲ್ಲಿದ್ದರೆ ವಿಧ್ವಂಸಕತೆಯ ಛಾಯೆಯನ್ನು ಹೊತ್ತಿರುತ್ತದೆ. ಇದನ್ನು ಇನ್ನಷ್ಟು ಸರಳವಾಗಿ ಹೇಳಬೇಕಿದ್ದರೆ, ಅಮ್ಮನು ಮಗುವನ್ನು ಬೈಯುವಾಗ, ಹೊಡೆಯುವಾಗ ಆ ಸಿಟ್ಟಿನ ಹಿಂದೆ ಒಂದು ಉದ್ದೇಶವಿರುತ್ತದೆ. ಅದು ಚಿಕಿತ್ಸಕ ಮಾದರಿಯಲ್ಲಿಯೂ ಇರುತ್ತದೆ. 'ಇನ್ನು ಮುಂದೆ ಮಗ ಇಂತಹ ಕೆಲಸ ಮಾಡಬಾರದು' ಎಂಬ ಆಶಯಕ್ಕೇ ಹೆಚ್ಚು ಒತ್ತು ಇರುತ್ತದೆಯೇ ಹೊರತು, ಬೇರೆ ಉದ್ದೇಶ ಇರುವುದಿಲ್ಲ. ಸಾಮಾಜಿಕ ಸಮಸ್ಯೆಗಳ ಬಗ್ಗೆ, ಅಥವಾ ಭ್ರಷ್ಟಾಚಾರದ ವಿರುದ್ಧದ ಸಿಟ್ಟು ಚಿಕಿತ್ಸಕ ರೂಪದಲ್ಲಿದ್ದಾಗ ಅದು ಗೋಡೆಯನ್ನು ಕಲುಷಿತಗೊಳಿಸುವ ಸಂಭವ ಕಡಿಮೆ. ಚಿಕಿತ್ಸಕ ಸಿಟ್ಟಿನಲ್ಲಿ ಸಂಯಮವು ಸೇರಿರುತ್ತದೆ.

## ವ್ಯಂಗ್ಯದ ಛರ್ಜಿ

ರಾಜ್ಯಮಟ್ಟದ ರಾಜಕೀಯ ಮುಖಂಡರೊಬ್ಬರು ಭಾಷಣ ಮುಗಿಸಿ ವೇದಿಕೆಯಿಂದ ಇಳಿಯುತ್ತಿದ್ದಂತೆಯೇ ಸುಪ್ರಭಾ ರಾವ್ ಬಹಳ ಸಿಟ್ಟಿನಿಂದ ತಮ್ಮ ಫೇಸ್‌ಬುಕ್ ಪೇಜ್‌ನಲ್ಲಿ ತಮ್ಮ ಅನಿಸಿಕೆ ಅಪ್‌ಲೋಡ್ ಮಾಡಿದರು. 'ಭಾಷಣದ ಬಳಿಕ ಇವರ ಮೂತಿ ಬಣ್ಣತೆಗೆದ ನಾಟಕದವರ ಮೂತಿಯಂತಿದೆ' ಎನ್ನುವ ಟಿಪ್ಪಣಿಯದು.

ಸದಾ ಹೋಲಿಕೆಗಳನ್ನು ನೀಡುತ್ತ, ತೀವ್ರ ಟೀಕೆಗಳನ್ನೇ ಮಾಡುತ್ತ ಇರುವ ಸುಪ್ರಭಾ ಅವರ ಹೇಳಿಕೆ ಅಪ್‌ಲೋಡ್ ಆಗಿ ಎರಡೇಕ್ಷಣದಲ್ಲಿ ಪ್ರತಿಕ್ರಿಯೆಗಳು ವ್ಯಕ್ತವಾದವು. ಬಣ್ಣ ತೆಗೆದ ಮೇಲೆ ಕಲಾವಿದರು ಚಂದವಿಲ್ಲ ಎಂಬ ಅರ್ಥವೇ, ಕಲಾವಿದರು ಕೀಳು ಎಂಬ ಇಂಗಿತವೇ ಎಂಬ ಸಜ್ಜನಿಕೆಯ ಪ್ರತಿಕ್ರಿಯೆಗಳ ಸಾಲು ಒಂದೆಡೆಯಾದರೆ, ರಾಜಕೀಯ ನಿಲುವುಗಳನ್ನೇ ವಿರೋಧಿಸುವ ಭರಾಟೆಯಲ್ಲಿ ಎಷ್ಟೋ ಮಂದಿ ಭಾಷೆಯ ಸಜ್ಜನಿಕೆಯನ್ನೇ ಮೀರಿದ್ದರು. ಕಮೆಂಟ್ ಬಾಕ್ಸ್ ಎನ್ನುವುದು ತಿಪ್ಪೆಯರೂಪ



